ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ:ನಿಪ್ರಾಶಿ : ಎಡಿಎಂ-2(4)ಜಲಾಮೃತ ಕಾರ್ಯಕ್ರಮ-31/2019-20 ದಿನಾಂಕ:15-07-2019

***ಪರಿಸರವನ್ನು ಬೆಳೆಸಿ, ನೀರನ್ನು ಸಂರಕ್ಷಿಸಿ ಜೀವಸಂಕುಲವನ್ನು ಉಳಿಸಿ***

***"ರಾಜ್ಯ ಜಲವರ್ಷ 2019"***

## ಜ್ಞಾಪನ

**ವಿಷಯ:** ಶಾಲೆಗಳಲ್ಲಿ ಜಲಾಮೃತ ಕಾರ್ಯಕ್ರಮ ಯಶಸ್ವಿ ಅನುಷ್ಠಾನದ ಬಗ್ಗೆ ಕೈಗೊಂಡ ಕ್ರಮದ ಕುರಿತು ಪ್ರಗತಿ ವರದಿ ನೀಡುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿ ಪತ್ರ ಸಂ: ಎಡಿಎಂ-2(4)ಜಲಾಮೃತ ಕಾರ್ಯಕ್ರಮ-31/2019-20 , ದಿನಾಂಕ :28-06-2019
2. ದಿನಾಂಕ:10-07-2019ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಜಲಾಮೃತ ಯೋಜನೆ ಪ್ರಗತಿ ಪರಿಶೀಲನಾ ಸಭೆ ಸೂಚನೆಯಂತೆ.

* * *

ಶಾಲೆಗಳಲ್ಲಿ ಜಲಾಮೃತ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗಳಿಸುವ ಸಂಬಂಧ ಹಾಗೂ ಶಾಲಾ ಹಂತದಲ್ಲಿ ಜಲವರ್ಷವನ್ನು ಆಚರಿಸುವ ಬಗ್ಗೆ ಉಲ್ಲೇಖಿತ-1ರ ಪತ್ರದಲ್ಲಿ ಈ ಕಛೇರಿ ಸುತ್ತೋಲೆಯಂತೆ ಕ್ರಮಕೈಗೊಳ್ಳಲು ತಿಳಿಸಲಾಗಿತ್ತು. ಈ ಸಂಬಂಧ 2019-20ನೇ ಸಾಲಿಗೆ ರಚಿಸಿಕೊಂಡಿರುವ ಶೈಕ್ಷಣಿಕ ಮಾರ್ಗಸೂಚಿಯನ್ನಾಧರಿಸಿ ಜಲಸಂರಕ್ಷಣಾ ಚಟುವಟಿಕೆಗಳನ್ನು ಹಮ್ಮಿಕೊಂಡು ಈ ಚಟುವಟಿಕೆಗೆ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ ದಿನಾಂಕ:05-07-2019 ರೊಳಗಾಗಿ ಈ ಕಛೇರಿಯ ಇ-ಮೇಲ್ ವಿಳಾಸಕ್ಕೆ (**primarydpi@gmail.com**) ಕ್ಕೆ ಸಲ್ಲಿಸಲು ತಿಳಿಸಲಾಗಿತ್ತು. ಈ ಸಂಬಂಧ ನಿಮ್ಮಿಂದ ಇದುವರೆವಿಗೂ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ.

ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರುಗಳಿಗೆ, ಮಕ್ಕಳಿಗೆ ನೀರಿನ ಸಂರಕ್ಷಣೆ ಕುರಿತಾಗಿ ಶಾಲೆಗಳಲ್ಲಿ ಪ್ರತಿಜ್ಞಾವಿಧಿಯನ್ನು ಬೋಧಿಸುವುದು. ಪ್ರತಿಜ್ಞಾವಿಧಿ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸುತ್ತೋಲೆಗಳ ಮಾರ್ಗಸೂಚಿಗಳಂತೆ ಜಲಸಂರಕ್ಷಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂಬಂಧವಾಗಿ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರ ಕಛೇರಿ (ಆಡಳಿತ) ಯ ವೃತ್ತಿ ಶಿಕ್ಷಣ ವಿಷಯ ಪರಿವೀಕ್ಷಕರನ್ನು ಮತ್ತು ಡಯಟ್‌ನ ವೃತ್ತಿ ಶಿಕ್ಷಣ ಉಪನ್ಯಾಸಕರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸುವುದು. ಸದರಿ ಕಾರ್ಯಕ್ರಮದ ಅನುಷ್ಠಾನ ಕುರಿತಂತೆ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಪ್ರತಿ ವಾರಕ್ಕೊಮ್ಮೆ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತದೆ. ನೇಮಕಗೊಂಡ ನೋಡಲ್ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಅಧೀನ ಕಛೇರಿಗಳಲ್ಲಿ / ಶಾಲೆಗಳಲ್ಲಿ ಕಾರ್ಯಕ್ರಮದ ಅನುಷ್ಠಾನದ ಕುರಿತಂತೆ ಕೈಗೊಂಡ ಕ್ರಮದ ಕುರಿತು ಪ್ರಗತಿ ವರದಿಯನ್ನು ವಿಳಂಬಕ್ಕೆ ಆಸ್ಪದ ಕಲ್ಪಿಸದಂತೆ ಈ ಕಛೇರಿಗೆ ನೀಡುವುದು. ಹಾಗೂ ಸಾಫ್ಟ್ ಪ್ರತಿಯನ್ನು ಇ-ಮೇಲ್ ವಿಳಾಸಕ್ಕೆ (**primarydpi@gmail.com**) ಸಲ್ಲಿಸುವುದು.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ
1. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಉಪನಿರ್ದೇಶಕರ ಮುಖಾಂತರ ಅಗತ್ಯ ಕ್ರಮಕ್ಕಾಗಿ.
3. ಗೌರವ ವಂದನೆಗಳೊಂದಿಗೆ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ ಬೆಂಗಳೂರು ರವರಿಗೆ ಮಾಹಿತಿಗಾಗಿ.
4. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ:ನಿಪ್ರಾಶಿ : ಎಡಿಎಂ-2(4)ಜಲಾಮೃತ ಕಾರ್ಯಕ್ರಮ-31/2019-20 ದಿನಾಂಕ:11-07-2019

## ಪ್ರತಿಜ್ಞಾ ವಿಧಿ

" ಭವ್ಯ ಭಾರತದ ಸತ್ಪ್ರಜೆಯಾದ ನಾನು ಮುಂದಿನ ಪೀಳಿಗೆ ಹಾಗೂ ಭವಿಷ್ಯದ ಹಿತ ದೃಷ್ಟಿಯಿಂದ ಅತ್ಯಮೂಲ್ಯವಾದ ಜೀವ ಜಲವನ್ನು ಎಲ್ಲಾ ವಿಧಾನಗಳಿಂದಲೂ ಸಂರಕ್ಷಿಸುತ್ತೇನೆ .ನೀರಿನ ಅಪಮೌಲ್ಯ ಮತ್ತು ಮಾಲಿನ್ಯವನ್ನು ತಡೆಗಟ್ಟಲು ಶುದ್ಧ ಕುಡಿಯುವ ನೀರಿನ ಮೂಲವಾದ ನದಿ,ಕೆರೆ,ತೊರೆ,ಬಾವಿ ಇತ್ಯಾದಿಗಳನ್ನು ಮಲಿನಗೊಳಿಸದೇ ಜಲ ಸಂರಕ್ಷಿಸುವಲ್ಲಿ ಸರ್ಕಾರದೊಂದಿಗೆ ಕೈಜೋಡಿಸುತ್ತೇನೆಂದೂ, ಗಿಡ ಮರಗಳನ್ನು ನೆಡುವ ಮೂಲಕ, ಬದುಗಳನ್ನು ನಿರ್ಮಿಸುವ ಹಾಗೂ ಸಾಮಾಜಿಕ ಅರಣ್ಯ ಅಭಿವೃದ್ಧಿಪಡಿಸುವ ಮೂಲಕ ,ಮಳೆ ನೀರು ಕುಯ್ಲು ಇತ್ಯಾದಿ ವಿಧಾನಗಳ ಮೂಲಕ ಅಂತರ್ಜಲ ಹೆಚ್ಚಿಸಲು ಶ್ರಮಿಸುತ್ತೇನೆಂದೂ, ಎಲ್ಲೇ ನೀರಿನ ಸೋರಿಕೆ,ಅಪವ್ಯಯ ಕಂಡುಬಂದರೆ ಅದರ ಸಂರಕ್ಷಣೆಗೆ ಹಾಗೂ ಸದ್ಬಳಕೆಗೆ ಎಲ್ಲಾ ರೀತಿಯ ಅಗತ್ಯ ಕ್ರಮವಹಿಸುವುದಾಗಿ ಕಾಯಾ ವಾಚಾ ಮನಸಾ ಪ್ರಮಾಣೀಕರಿಸುತ್ತೇನೆ."

*Annexure-I*

Jal Shakti Abhiyan

| S. No. | Name of State/UT | Number of students participated | Number of participants other than students | Number of activities | | | | | | | |
|---|---|---|---|---|---|---|---|---|---|---|---|
| | | | | Public Rallies | Nukkad nataks | Plantation Drives | Seminars/ lectures | Painting Competitions | Debates | Any Other | Total |
| | | | | 1 | 2 | 3 | 4 | 5 | 6 | 7 | 8=sum(1 to 7) |
| | | | | | | | | | | | |
| | | | | | | | | | | | |